O.S. 3/2018

P.W. 1

<u>**ಸಾಕ್ಷಿಯನ್ನು ದಿನಾಂಕಃ 14-02-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**</u>

<u>**ಪಾಟೀಸವಾಲುಃ ಶ್ರೀ.ಟಿ.ಹೆಚ್.ಎಂ.ಎಂ. ವಕೀಲರವರಿಂದಃ**</u>

ನಾನು ಬಿ.ಎ ಕಲಿತಿದ್ದೇನೆ. ದಾವಾ ಆಸ್ತಿ ಖರೀದಿ ಮಾಡುವ ಮೊದಲು ಮೂಲ ದಾಖಲೆಗಳನ್ನು ನೋಡಿದ್ದೇನೆ. ಪುರಸಭೆಯವರು ನೀಡಿದ ಖಾತಾ ದಾಖಲೆಗನಳ್ಳು ನೋಡಿ ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ್ದೇನೆ. ಖಾತಾ ಎಕ್ಸ್ಟ್ರಾಕ್ ಬಿಟ್ಟು ಬೇರೆಯಾವುದೇ ದಾಖಲೆ ಪರಿಶೀಲಿಸಿರುವುದಿಲ್ಲ. ದಾವಾ ಆಸ್ತಿ ಪುರಸಭೆಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಒಳಗೊಂಡಂತೆ 183 ನಿವೇಶನಗಳು ಪುರಸಭೆಗೆ ಸೇರಿದ್ದವು ಎಂದರೆ ಸರಿಯಲ್ಲ. 183 ನಿವೇಶನಗಳ ಪೈಕಿ 37 ನಿವೇಶನಗಳ ಬಹಿರಂಗ ಹರಾಜು ಆಗದೇ ಹಾಗೇಯೇ ಉಳಿದಿದ್ದವು ಎಂದರೆ ಸರಿಯಲ್ಲ. ಆ 37 ನಿವೇಶನಗಳಲ್ಲಿ ದಾವಾ ಆಸ್ತಿಯ ಇತ್ತು ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಸರ್ವೆ ನಂಬರ್ ಹೇಳಲಾಗುವುದಿಲ್ಲ. ದಾವಾ ಆಸ್ತಿ ಕೃಷಿಯೇತರ ಜಮೀನು ಆಗಿ ಪರಿವರ್ತನೆಯಾಗಿರುವ ಕುರಿತು ದಾಖಲೆಗಳನ್ನು ನೋಡಿರುವುದಿಲ್ಲ. ಪುರಸಭೆಗೆ ಸೇರಿದ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಹಾಕುವ ಪೂರ್ವದಲ್ಲಿ ಪುರಸಭೆಗೆ ನೋಟಿಸು ನೀಡಿರುವುದಿಲ್ಲ. ಈ ದಾವೆಯಲ್ಲಿ ಅವಶ್ಯಕ ಪಕ್ಷಕಾರರನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

14-02-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**